



# ನಾರಿಕೇಳ! ಇದು ಕಲೆಯ ಕಾಲ!

ಕಲ್ಪವೃಕ್ಷ ಖ್ಯಾತಿಯ ತೆಂಗು ಕಲಾವಿದರ ಸೃಜನಶೀಲತೆಗೂ ಮಾಧ್ಯಮವಾಗಿ ಒದಗಿ ಬರಬಲ್ಲದು. ಕೇರಳ ಹಾಗೂ ಗೋವಾಗಳಲ್ಲಿ ತೆಂಗಿನ ಕಲಾಕೃತಿಗಳು ಮಾರುಕಟ್ಟೆಯ ರೂಪ ಪಡೆದುಕೊಂಡಿವೆ.



■ ಸುನೀಲ್ ಬಾರ್ಕೂರ್

ತೆಂಗಿಲ್ಲದೆ ಅಡುಗೆಯಿಲ್ಲ, ಪೂಜೆಯಂತೂ ಇಲ್ಲವೇ ಇಲ್ಲ. ತೆಂಗಿನ ನೀರು ಕುಡಿಯಲು ಪೌಷ್ಟಿಕ, ಸುರಿದರೆ ಅಭಿಷೇಕ. ಗರಿಗಳು ಕಸಬರಿಗೆಗೆ, ಸಿಪ್ಪೆ ಹಲವು ಉತ್ಪನ್ನಗಳಿಗೆ ಕಚ್ಚಾವಸ್ತು. ನೀರು ಕಾಯಿಸಲು ಹಂಡೆಗೂ ತೆಂಗಿನಮಟ್ಟೆ ಉತ್ತಮ. ಇನ್ನು ಚಿಪ್ಪಂತೂ ಜಿಲೇಬಿ ಕರಿಯುವುದರಿಂದ ಹಿಡಿದು ಔಷಧಿ ತಯಾರಿಕೆಯವರೆಗೆ ಎಲ್ಲೆಲ್ಲೂ ಸೈ. ಈ ತೆಂಗಿನ ಉಪಯುಕ್ತತೆ ಇಷ್ಟಕ್ಕೇ ನಿಲ್ಲುವುದಿಲ್ಲ. ತೆಂಗು ಇತ್ತೀಚಿನ ದಿನಗಳಲ್ಲಿ ಕಲಾವಿದರಿಗೂ ಸ್ಫೂರ್ತಿಯಾಗಿ, ಅವರ ಕೈಯಲ್ಲಿ ಕಲಾಕೃತಿಯಾಗಿ ಅರಳಿ ಮನಸೂರೆಗೊಳ್ಳುತ್ತಿದೆ.

ಭಾರತದಲ್ಲಿ ತೆಂಗು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುವುದು ದಕ್ಷಿಣ ಭಾರತದ ರಾಜ್ಯಗಳ ಜೊತೆಗೆ ಗೋವಾದಲ್ಲಿ. ತೆಂಗಿನಿಂದ ಕಲಾಕೃತಿಗಳನ್ನು ತಯಾರಿಸುವ ಕಲಾವಿದರು ಈ ಎಲ್ಲ ರಾಜ್ಯಗಳಲ್ಲಿ ಇದ್ದರೂ, ಅವರನ್ನು ಸಂಘಟಿಸಿ ಈ ಕಲೆಗೊಂದು ಉದ್ಯಮದ ಸ್ಥಾನವನ್ನು ದೊರಕಿಸಿಕೊಟ್ಟಿರುವ ಶ್ರೇಯ ಕೇರಳಕ್ಕೆ ಸಲ್ಲುತ್ತದೆ. ಅಲ್ಲಿನ ಕ್ಯಾಲಿಕಟ್, ಕೋಝಿಕ್ಕೋಡ್ ಭಾಗದಲ್ಲಿ ಈ ಗುಡಿಕೈಗಾರಿಕೆಯು ಬೇರುಬಿಟ್ಟಿದೆ. ಕೇರಳದಿಂದ ಉತ್ತೇಜಿತವಾಗಿರುವ ಗೋವಾ ಆಡಳಿತವೂ 'ಕೇರಳ ಮಾಡೆಲ್' ಅನ್ನು ತಾನೂ ಅಳವಡಿಸಿಕೊಳ್ಳುತ್ತಿದ್ದು, ಕಲಾವಿದರಿಗೆ ಪ್ರೋತ್ಸಾಹ ನೀಡುತ್ತಿದೆ. ಕೇರಳದಂತೆಯೇ ಪ್ರವಾಸೋದ್ಯಮವೇ ಪ್ರಮುಖ ಸಂಪನ್ಮೂಲವಾಗಿರುವ ಗೋವಾದಲ್ಲಿ, 'ಮೇಡ್ ಇನ್ ಗೋವಾ' ಬ್ರ್ಯಾಂಡ್‌ನಲ್ಲಿ ತೆಂಗಿನ ಕಲಾಕ್ರತಿಗಳನ್ನೂ ಮಾರುಕಟ್ಟೆ ಮಾಡಲಾಗುತ್ತಿದೆ.

ಕೇರಳದ ತೆಂಗಿನ ಕಲಾಕೃತಿಗಳಲ್ಲಿ ತೆಂಗಿನ ಚಿಪ್ಪುಗಳನ್ನು ಮುಖ್ಯವಾಗಿ ಬಳಸಿಕೊಳ್ಳಲಾಗುತ್ತಿದ್ದರೆ, ಗೋವಾದ ಕಲಾಕೃತಿಗಳು ಸಂಪೂರ್ಣ ತೆಂಗನ್ನೇ ಪ್ರಮುಖವಾಗಿ ಬಳಸಲಾಗುತ್ತಿದೆ. ಈ ಕಲಾಕೃತಿಗಳನ್ನು ತಯಾರಿಸುವವರಲ್ಲಿ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ತೆಂಗಿನಿಂದ ಕಲಾಕೃತಿಗಳನ್ನು ರೂಪಿಸುವುದು ಗೃಹೋದ್ಯಮದ ರೂಪ ಪಡೆದುಕೊಳ್ಳುತ್ತಿದೆ.

ಗೃಹಿಣಿಯರ ಕ್ರಿಯಾಶೀಲತೆಗೆ ನೀರೆರೆದು, ಅವರ ಕುಟುಂಬಗಳಿಗೆ ಆರ್ಥಿಕ ಬೆಂಬಲವೂ ಆಗುವಂತಹ ಕೇರಳ ಹಾಗೂ ಗೋವಾ ಮಾಡೆಲ್‌ಗಳು ಕರ್ನಾಟಕದ್ದೂ ಆಗಬೇಕಾಗಿದೆ.

ಪ್ರತಿಕ್ರಿಯಿಸಿ: feedback@sudha.co.in